OS No. 75/2016 PW-**1**

<u>ದಿನಾಂಕ **08.11.2023** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ **5** ರಿಂದ **8** ನೇ ಪ್ರತಿವಾದಿಯವರ ಪರ ವಕೀಲರಿಂದಃ</u>

ಗಿರಿಗಮ್ಮ ನನ್ನ ತಾಯಿ. ತಿಮ್ಮೇಗೌಡ ನನ್ನ ತಾತ. ದಾವಾ ಷಡ್ಯೂಲ್ ಸ್ವತ್ತುಗಳು ನನ್ನ ತಾಯಿ ಗಿರಿಗಮ್ಮ ರವರ ಕಡೆಯಿಂದ ಬಂದಿರುತ್ತದೆ. ಗಿರಿಗಮ್ಮರವರಿಗೆ ದಾವಾ ಸ್ವತ್ತುಗಳಲ್ಲದೇ ಇನ್ನು ಕೆಲವು ಸ್ವತ್ತುಗಳು ಇವೆ. ಸದರಿ ಎಲ್ಲಾ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ದಾವಾಯಲ್ಲಿ ನಮೂದಿಸಿದ ಷಡ್ಯೂಲ್ 1 ರಿಂದ 8 ರ ಸ್ವತ್ತಿಗಳಿಗೆ ಸಂಬಂದಪಟ್ಟಂತೆ ಪೂರಕವಾದ ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿ ಸರ್ವೆ ನಂಬರ್ 511 ರ ಬಗ್ಗೆ ನೀಡಿರುತ್ತೇನೆಂದು ನುಡಿಯುತ್ತಾರೆ. ಸರ್ವೆ ನಂಬರ್ 511 ರ ಒಟ್ಟು ವಿಸ್ತೀರ್ಣ 27 ಗುಂಟೆ ಎಂದರೆ ಹೌದು. ಸದರಿ ಸ್ವತ್ತನ್ನು ನನ್ನ ತಾಯಿ ಮತ್ತು ಅವರ 3 ಜನ ಗಂಡು ಮಕ್ಕಳು 1983 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆಂದರೆ ಸಾಕ್ಷಿ 3 ಜನ ಗಂಡು ಮಕ್ಕಳು ಭಾಗ ಮಾಡಿಕೊಂಡಿದ್ದರು ಆದರೆ ನನ್ನ ತಾಯಿ ಮಾಡಿಕೊಂಡಿಲ್ಲ. ಆ ಪ್ರಕಾರ 3 ಜನ ಗಂಡು ಮಕ್ಕಳು ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದರು ಎಂದರೆ ಸಾಕ್ಷಿ ಅದು ಪೋರ್ಜರಿ ದಾಖಲೆ ನನ್ನ ತಾಯಿ ಸಹಿ ಹಾಕಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 473/3 ರ ಒಟ್ಟು ವಿಸ್ತೀರ್ಣ 32 ಗುಂಟೆ ಜಮೀನು ನನ್ನ ತಾಯಿಯ ಹೆಸರಿನಲ್ಲಿದೆ. ಸದರಿ ಸ್ವತ್ತು ನನ್ನ ತಾಯಿಯ ಸ್ವತ್ತು. ಸದರಿ ಸ್ವತ್ತನ್ನು ನಾನು ಈ ದಾವೆಗೆ ಸೇರಿಸಿಲ್ಲ ಮತ್ತು ಸದರಿ ಸ್ವತ್ತಿನ ಬಗ್ಗೆ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇನೆ. ಸರ್ವೆ ನಂಬರ್ 511 ರಲ್ಲಿ ಈಗ ಒಟ್ಟು 27 ಗುಂಟೆ ವಿಸ್ತೀರ್ಣ ಇಲ್ಲ 5 ವರೆ ಗುಂಟೆ ಜಮೀನನ್ನು ಮಾಡಿರುತ್ತಾರೆ ಇನ್ನು ಉಳಿದ ಎರಡು 5 ವರೆ ಗುಂಟೆ ವಿಸ್ತೀರ್ಣವುಳ್ಳ ಜಮೀನುಗಳು ಇದೆ ಎಂದರೆ ಸರಿ. ನನ್ನ ಅಣ್ಣ ಕೃಷ್ಣೇಗೌಡ ಮತ್ತು ಅವರ ಮಗ ಕುಮಾರ್ ರವರು ಮಾರಾಟ ಮಾಡಿರುತ್ತಾರೆ. ಸದರಿ ಆಸ್ತಿಗಳನ್ನು ಖರೀದಿಸಿದ ಖರೀದಿದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಹೌದು. ಈಗ ಕೆಂಗಲ್ಲೇಗೌಡ ಮತ್ತು ತಿಮ್ಮೇಗೌಡರವರ ಹೆಸರಿನಲ್ಲಿ ತಲಾ 5 ವರೆ ಗುಂಟೆ ಜಮೀನು ಇದೆ ಎಂದರೆ ಹೌದು. ಸದರಿ ಜಮೀನುಗಳು ಈಗ ಅಸ್ತಿತ್ವದಲ್ಲಿ ಇಲ್ಲ ಭೂ ಸ್ವಾದೀನಗೊಡಿಂದೆ ಎಂದರೆ

ಹೌದು. ಪ್ರತಿವಾದಿಯವರಿಗೆ ಭೂ ಸ್ವಾಧೀನದ ಪರಿಹಾರದ ಹಣ ಹೋಗುತ್ತದೆ ಎನ್ನುವ ಕಾರಣದಿಂದ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ದಾವಾ ಐಟಂ 4 ರ ಸ್ವತ್ತನ್ನು ಈಗ ಮಾರಾಟ ಮಾಡಿದ್ದು ಖರೀದಿದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ಮೌನವಾಗಿರುತ್ತಾರೆ. ದಾವಾ ಐಟಂ 5 ರ ಖಾನೇಷುಮಾರಿ ಸಂಖ್ಯೆ 174/1 ರ ಸ್ವತ್ತನ್ನು 2016 ನೇ ಇಸವಿಯಲ್ಲಿ ಮಾರಾಟ ಮಾಡಿರುತ್ತಾರೆಂದರೆ ಹೌದು. ಈಗ ಭಾಗ ಆಗುವಂತಹ ಯಾವುದೇ ಸ್ವತ್ತುಗಳು ಇಲ್ಲ ನನ್ನ ತಾಯಿಯೇ 1983 ರಲ್ಲಿಯೇ ನನ್ನ ಅಣ್ಣಂದಿರಿಗೆ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸರ್ವೆ ನಂಬರ್ 473/3 ವಿಸ್ತೀರ್ಣ 32 ಗುಂಟೆಗೆ ಸಂಬಂದಪಟ್ಟಂತೆ ಎ ಸಿ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿತ್ತು ಎಂದರೆ ಹೌದು. ಆರ್ ಎ ಎಲ್ ಕೆ ಪಿ 435/2009-10 ರ ಅಪೀಲನ್ನು ನಾನೇ ಸಲ್ಲಿಸಿರುತ್ತೇನೆಂದರೆ ಹೌದು. ಸದರಿ ಕೇಸಿನಲ್ಲಿ ನಾನು ನಮ್ಮ ಕುಟುಂಬದಲ್ಲಿ ವಿಭಾಗ ಆಗಿದೆ ಎಂದು ವಿಭಾಗ ಪತ್ರವನ್ನು ಎಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ಕೆಂಗಲ್ಲೇಗೌಡ ಮತ್ತು ತಿಮ್ಮೇಗೌಡರವರಿಗೆ ಸೇರಿದ 5 ವರೆ ಗುಂಟೆ ಸ್ವತ್ತುಗಳು ಭೂ ಸ್ವಾಧೀನವಾದ ಕಾರಣ ಅವರಿಗೆ ಪರಿಹಾರದ ಹಣ ಬರುತ್ತದೆ ಎಂದು ನಾನು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ವಿಭಾಗ ಆಗುವಂತಹ ಯಾವುದೇ ಸ್ವತ್ತುಗಳು ಇಲ್ಲ ನನ್ನ ತಾಯಿಯೇ ವಿಭಾಗ ಮಾಡಿಕೊಟ್ಟಿರುತ್ತಾರೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ಶುಭಾ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.